ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಕಾಗೋಡು ತಿಮ್ಮಪ್ಪನವರ ಆಡ್ಜೋರ್ನಮೆಂಟ್ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ಆಸಾಧ್ಯ ಶಕ್ತಿ ಇರಬಹುದು. 60 ಅಡಿಯಿಂದ ಬಿದ್ದರೆ ಒಂದೇ ಕಡೆ ಏಟು ಬೀಳುತ್ತದೆ, ಬಾಕಿ ಕಡೆ ಏಟು ಬೀಳುವುದಿಲ್ಲವೆಂದು ವಾದ ಮಾಡಿದ್ದಾರೆ. 60 ಅಡಿಯಿಂದ ಬಿದ್ದರೆ ತಲೆ ಒಡೆಯುತ್ತದೆ, ಮೈ ಮುರಿಯುತ್ತದೆ, ಕಾಲು ಮುರಿಯುತ್ತದೆ, ಮೂಳೆ ಮುರಿದು ಹೋಗುತ್ತದೆ. ಸಾಧಾರಣವಾದ ಪ್ರಶ್ನೆಯಿಂದ ನಾನು ಹೇಳುತ್ತಾ ಇರುವುದು. ಆದುದರಿಂದ ಇದರ ಬಗ್ಗೆ ವಾಖ್ಯಾನ ಮಾಡುವುದು ಅವಶ್ಯಕ ಡಾಕ್ಟರ್ ಹೇಳಿರತಕ್ಕಂಥದ್ದು ಏನು ಹೇಳಿದ್ದಾರೆ ? ಡಾಕ್ಟರ್ ಹೇಳಿದ್ದು ನಾವು ಮರೆಮಾಚ ಬೇಕಾಗಿಲ್ಲ. 60 ಅಡಿಯಿಂದ ಬಿದ್ದಾಗ ಸುಮಾರು ಐದೂವರೆ ಗಂಟೆ ಸಮಯ, ಇದು ಅದ ಮೇಲೆ ಕಂಡುಬಂದಧ್ದು ಫಸ್ಟ್ ಇಂಪ್ರೆಷನ್ ಸುಮ್ಮನೇ ಮನುಷ್ಯ ಬೀಳುವುದಿಲ್ಲ, ಯಾರಾದರೂ ನೂಕಿರ ಬೇಕು ಇಲ್ಲ ಆವನೇ ಬಿದ್ದಿರಬೇಕು, ಹುಚ್ಚು ಬಂದು ಬಿದ್ದಿರಬೇಕು, ಏನಾದರೂ ನಡೆದಿರಬೇಕು ಇನ್ನು ಯಾವುದಾದರೂ ಕಾರಣದಿಂದ ಬಿದ್ದಿದ್ದಾನೆಂದು ಊಹೆಯಿಂದ ಕೇಸ್ ರಿಜಿಸ್ಟರ್ ಮಾಡಿದ್ದು, ಪಾಯಿಜನಿಂಗ್ ಅಲ್ಲ, ಮರ್ಡರ್ ಆಗಬೇಕು, ಆದುದರಿಂದ ಆ ಕೇಸನ್ನು 302 ಎಂದು ಚೇಂಜ್ ಮಾಡಿದೆವು. ಅವನ ತಂದೆಯವರು, ಸ್ನೇಹಿತರು ಯಾರು ಯಾರು ಏನೇನು ಆಪಾದನೆ ಮಾಡಿ ದ್ದಾರೆ ಅವೆಲ್ಲವನ್ನೂ ಕೂಡ ತನಿಖೆಗೆ ಒಳಪಡಿಸಿದೆ. ಅಲ್ಲದೆ ಇಲ್ಲಿಂದ ಸಿ.ಐ.ಡಿ. ಪೋಲೀಸ್ ಅಧಿಕಾರಿಗಳು ಹೋಗಿ ನೋಡಿದ್ದಾರೆ, ಅವರ ತಂದೆಯವರಿಂದ, ಸ್ನೇಹಿತರಿಂದ ಮರ್ಡರ್ ಆಗಿರಬೇಕೆಂದು ಅರ್ಜಿ ಗಳು ಬಂದಿವೆ. ಯಾರು ಯಾರು ಏನೇನು ಹೇಳಿದ್ದಾರೆ, ಅನುಮಾನ ಪಟ್ಟಿದ್ದಾರೆ ಅವರೆಲ್ಲರನೂ ವಿಚಾರಣೆ ಮಾಡಿದ್ದೇವೆ. ಒಂದು ವೇಳೆ ಮಾನ್ಯ ಸದಸ್ಯರಿಗೆ ಏನಾದರೂ ವಿಷಯ ಗೊತ್ತಿದ್ದ ಪಕ್ಷದಲ್ಲಿ ಅದನ್ನು ತನಿಖಾಧಿಕಾರಿಗಳಿಗೆ ತಿಳಿಸುವುದರಲ್ಲಿ ಯಾವ ತಪ್ಪು ಇರುತ್ತಿರಲಿಲ್ಲ. ಆದುದರಿಂದ ತಾವು ಏನು ಊಹೆ ಮಾಡಿದ್ದೀರಿ ಅದು ಸರಿಯಲ್ಲ. ಪೊಲೀಸ್ ಅಧಿಕಾರಿಗಳು ಅಷ್ಟೇ ಅಲ್ಲ, ಸೆಂಟ್ರಲ್ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು, ಸಿ. ಐ. ಡಿ, ಡಿಪಾರ್ಟ್‌ಮೆಂಟಿನವರು ಕೂಡ ಅಳವಾಗಿ ಈ ಕೇಸಿನ ಬಗ್ಗೆ ಅಭ್ಯಾಸ ಮಾಡಿ ಯಾರು ಯಾರು ಅನುಮಾನ ಪಟ್ಟು ಅರ್ಜಿಯನ್ನು ಕೊಟ್ಟಿದ್ದರು ಅದರ ಬಗ್ಗೆಯೂ ತನಿಖೆಮಾಡಿ ನೋಡಿದ್ದರಲ್ಲಿ ಸಾಕಷ್ಟು ಮಾಹಿತಿ, ಸಬ್‌ಸ್ಟಾನ್ ಷಿಯಲ್ ಎವಿಡೆನ್ಸ್ ಯಾವುದು ಸಿಕ್ಕಿಲ್ಲ. ಆದುದರಿಂದ ಅದು ಮರ್ಡರ್ ಅಲ್ಲವೆಂದು ವ್ಯಕ್ತವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮೃತರ ತಂದೆ ನನಗೆ ಕಾಗದ ಬರೆದಿದ್ದಾರೆ, ಮೃತನು ವಾಸ ಮಾಡತಕ್ಕ ಕೊಠಡಿಯಲ್ಲಿ ರಕ್ತದ ಕಲೆಗಳು ಇದ್ದವು ಎಂದು ಕಾಗದ ಬರೆದಿದ್ದಾರೆ. ಸರ್ಕಾರಕ್ಕೂ ಅವರೇ ಕಾಗದವನ್ನು ಹಾಕಿದ್ದಾರೆ. ಯಾರು ಕೂಡ ತಕ್ಷಣ ಅದನ್ನು ಪರೀಕ್ಷಿಸಿ ನೋಡಿಲ್ಲ ಅದನ್ನು ಪರೀಕ್ಷಿಸಿ ನೋಡಿದ್ದರೆ ಗೊತ್ತಾಗುತ್ತಿತ್ತು ಜೊತೆಗೆ ಮೃತನ ತಂದೆ ಒಂದು ಹೇಳಿಕೆಯನ್ನು ಕೊಟ್ಟಿ ದ್ದಾರೆ. ನಮಗೆ ಸಂಶಯ ಬಂದಿರತಕ್ಕದ್ದು ಏನೆಂದರೆ ಸರ್ಕಲ್ ಇನ್ಸ್‌ಪೆಕ್ಟರ್ ಕೂಡ ಶರೀಕು ಆಗಿರುವುದರಿಂದ ಪ್ರಾಮಾಣಿಕವಾಗಿ ತನಿಖೆಯನ್ನು ನಡೆಸುವುದಕ್ಕೆ ಅವಕಾಶವಾಗಿಲ್ಲ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಇದು ಸಂಶಯಾತ್ಮಕವಾಗಿರುವುದರಿಂದ ಇದರ ಬಗ್ಗೆ ತನಿಖೆ ನಡೆಸುವುದಕ್ಕಾಗಿ ಬೆಂಗಳೂರಿನಿಂದ ಯಾರಾದರೂ ಒಬ್ಬರು ಸಿ.ಐ.ಡಿ.ಯನ್ನು ಕಳುಹಿಸಿಕೊಟ್ಟು ಸತ್ಯಾಸತ್ಯತೆಯನ್ನು ಪರಿಶೀಲನೆ ನಡೆಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

2–30 p.m.

Sri H. M. CHANNABASAPPA.—I have already told, Madam Speaker, that the D.I.G., C.I.D., from Bangalore, has done it : it is not the Mysore D.I.G. He has personally investigated it and gone thoroughly into the allegations made by his father and his relatives. The Police have done all that is necessary.

(ii) re : Scarcity for drinking water in some villages in Hassan Taluk.

Sri K. H. HANUME GOWDA (Hassan).—Madam, I beg to call the attention of the Hon'ble Minister for Health to the scarcity for drinking water in the villages of Hassan Constituency.

Sri H. SIDDAVEERAPPA (Minister for Health).—In reply to the above calling attention notice I make the following statement :

It is a fact that with the on-set of summer, during the current year, scarcity for drinking water is felt in 69 villages of Hassan Constituency as detailed below :

1. Hassan Kasaba Hobli.—20 villages.
2. Kattaya Hobli.—26 villages.
3. Shanthigrama Hobli.—23 villages.

In some villages the water supply sources are reported to have dried up and in some others, the water level has gone down. The Government have assessed the needs of these villages as to how best the afflicted people could be helped to overcome the phase of scarcity situation. In about 43 villages, wherein it is felt that deepening of the existing drinking water wells is neigher feasible nor possible, bore wells are proposed to be provided. The Chief Engineer, MI and PHE, Bangalore has taken action to despatch a High Speed Rig to Hassan taluk immediately. The Rig will start operation in a couple of days. Sufficient funds are provided to the PHE for this purpose. In the meantime, in order to tide over the difficulty faced by the people, temporary or pit wells have been dug in about 43 villages. In another 49 villages, deepening the existing drinking water wells is considered necessary. Deepening work is in progress in 4 villages. In the other villages also, the works will be started soon. Hobliwise details of the measures taken/proposed to be taken are as follows :

	Pit-wells provided.	Existing D. W. wells to be deepened.	Bore wells proposed.
1. Hassan Kasaba.	6	19	11
2. Kattaya.	26	11	15
3. Shanthigrama.	11	19	17
Total	43	49	43

All possible efforts are being made to provide water to the people and cattle in the affected villages.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, 69 ಹಳ್ಳಿಗಳಲ್ಲಿ ನೀರಿಗೆ ಅಭಾವ ಇದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಏತಕ್ಕೆಂದರೆ ನಾನು ಹೇಳುವುದು ಇದಕ್ಕಿಂತಲೂ ಜಾಸ್ತಿ ಹಳ್ಳಿಗಳಲ್ಲಿ ನೀರಿನ ಅಭಾವ ಇದೆ ಎಂದು ಹೇಳುತ್ತೇನೆ. ನಾನು ಅಲ್ಲಿಗೆ ಹೋಗಿ ಕಣ್ಣಾರೆ ನೋಡಿಕೊಂಡು ನಿನ್ನೆ ತಾನೇ ಬಂದೆ. ಸುಮಾರು 150 ಹಳ್ಳಿಗಳಿಗೆ ಮೇಲ್ಪಟ್ಟು ಜನಗಳಿಗೆ ಕುಡಿಯುವ ನೀರಿಗೆ ಮತ್ತು ದನಗಳಿಗೆ ಕುಡಿಯುವ ನೀರಿಗೆ ಅಭಾವ ಇದೆ. ಕೆಲವು ಹಳ್ಳಿಗಳಲ್ಲಿ 2-3 ಮೈಲಿಯಿಂದ ನೀರನ್ನು ತಂದು ದನಗಳಿಗೆ ನೀರು ಕುಡಿಸಬೇಕಾದ ಪ್ರಮೇಯ ತಾಸನದಲ್ಲಿ ಇದೆ. ಪರಿಸ್ಥಿತಿ ಹೀಗಿದ್ದರೂ ಕೂಡ ನಿಮ್ಮ ಅಧಿಕಾರಿಗಳು 69 ಹಳ್ಳಿಗಳೇ ಎಂದು ತಿಳಿಸಿರುವುದು ಮಾತ್ರಿಸ್ಸಿಗೆ ನೋವಾಗಿದೆ. ಆದ್ದರಿಂದ ನಾನು ಹೇಳುವುದು ನಿಜವಾದ ಪರಿಸ್ಥಿತಿಯನ್ನು ಸರ್ಕಾರಕ್ಕೆ ತರಲು ನಿಮ್ಮ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ ಎಂದು ಹೇಳುತ್ತೇನೆ. ಮತ್ತು ಈ ಸಂದರ್ಭದಲ್ಲಿ ತಾವು ಒಂದು ಹೇಳಿಕೆ ಏನು ಕೊಟ್ಟಿದ್ದೀರೋ ಎಲ್ಲಿ ಬೋರ್ ಹಾಕಬೇಕೋ ಅಲ್ಲಿಗೆ ರಿಗ್ ಮೆಷಿನ್ ಕಳುಹಿಸಿದ್ದೇನೆ ಎಂದು ಏನು ಹೇಳಿದಿರೋ ಅದಕ್ಕೆ ನಾನು ನಮ್ಮ ಜನತೆಯ ಪರವಾಗಿ ತಮಗೆ ಋಣಿಯಾಗಿದ್ದೇನೆ. ಈ ವಿಚಾರದಲ್ಲಿ ನಾನು ಹೇಳುವುದು ಏನೆಂದರೆ ಈಗ ಕಳುಹಿಸಿರತಕ್ಕಂಥ ರಿಗ್ ಮೆಷಿನ್ ದೊಡ್ಡದಾಗಿರುವುದರಿಂದ ಎಲ್ಲಾ ಹಳ್ಳಿಗಳಿಗೂ ಹೋಗುವುದಕ್ಕಾಗುವುದಿಲ್ಲ. ಈ ರಿಗ್ ಮೆಷಿನ್ ಸುಮಾರು 60-70 ಹಳ್ಳಿಗಳಿಗೆ ಹೊಗುವುದಕ್ಕೆ ಸಾಧ್ಯ ಇದೆ. ಬಾಕಿ ಹಳ್ಳಿಗಳಿಗೆ ರಿಗ್ ಮೆಷಿನ್ಸ್ ಹೋಗುವುದಕ್ಕೆ ಆಗದೇ ಇರುವುದರಿಂದ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಸಣ್ಣ ಸಣ್ಣ ಬೋರ್ ಮೆಷಿನ್‌ಗಳು ಇವೆ. ಅದರಲ್ಲಿ 5-10 ಮೆಷಿನ್‌ನಾದರೂ ತರಿಸಿ ಅವರಿಗೆ ಬೋರ್‌ವೆಲ್ ಮಾಡಿಸಿಕೊಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ವಿಚಾರ ಮಾಡುತ್ತೇನೆ. ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಸಣ್ಣ ಸಣ್ಣ ಮೆಷಿನ್ ಇದ್ದರೆ ಅದನ್ನು ತರಿಸಲಿಕ್ಕೆ ಏರ್ಪಾಡು ಮಾಡುತ್ತೇನೆ, ಅದನ್ನು ಕಳುಹಿಸಿಕೊಡಿ ಎಂದು ಹೇಳುವುದಕ್ಕೆ ಏರ್ಪಾಡು ಮಾಡುತ್ತೇನೆ. ಆ ಮೆಷಿನ್ ಎಲ್ಲ ಇದೆ ಅದನ್ನು ತರಿಸಲಿಕ್ಕೆ ಏರ್ಪಾಡು ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹಾಸನ ತಾಲ್ಲೂಕಿನಲ್ಲಿ ಈ ಅಭಾವ ಇದೆ ಎಂದು ಹೇಳಿದ್ದಾರೆ. ಆ ಒಂದು ಭಾಗದಲ್ಲೇ ನೀರಿನ ಅಭಾವ ಇದೆ ಅಂತಲ್ಲ, ಅರಸೀಕೆರೆ, ಮೈಸೂರು ತಿಪಟೂರು ಈ ರೀತಿ ಎಲ್ಲಾ ಭಾಗದಲ್ಲೂ ಕುಡಿಯುವ ನೀರಿನ ಅಭಾವ ಇದೆ. ಅನೇಕ ಜಿಲ್ಲೆಗಳಲ್ಲಿ ಈ ರೀತಿ ಅಭಾವ ಇದೆ. ದುರ್ದೈವದಿಂದ ಈ ರೀತಿ ತೊಂದರೆ ಬಂದಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಗಂಗೆ ಮತ್ತೆ ಬತ್ತಿ ಹೋದಳು. ಎಲ್ಲರನ್ನೂ ಬಿಟ್ಟು ನಿಮಗೇಕೆ ಕಷ್ಟ ಬಂತೋ ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೆಗೌಡ.—ಕಾಂಗ್ರೆಸ್ (ಒ) ಗೆದ್ದು ಬಂದಿರುವುದರಿಂದ ಈ ರೀತಿ ಕಷ್ಟ ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ನಮ್ಮನ್ನು ಕೈಬಿಟ್ಟಿರಿ ಅದಕ್ಕೆ ಕಷ್ಟ ಬಂದಿದೆ. ನನ್ನ ಅಭಿಪ್ರಾಯ ಹೇಳುವುದಾದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಬಹಳ ತೊಂದರೆ ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಬಗೆಹರಿಸಲಿಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ರಿಗ್ ಮೆಷಿನ್ ಕಳುಹಿಸಬೇಕಾದರೆ ಕಳುಹಿಸುತ್ತೇವೆ, ಎಷ್ಟು ಮೆಷಿನ್ ಅನ್ನು ಕಳುಹಿಸಬೇಕೋ ಅಷ್ಟನ್ನು ಕಳುಹಿಸುತ್ತೇವೆ. ಹಣದ ಅಭಾವ ಇಲ್ಲದೇ ಇರುವ ರೀತಿಯಲ್ಲಿ ನೋಡಿಕೊಳ್ಳುತ್ತೇವೆ. ಅಲ್ಲದೆ 32 ಆರ್. ಡಿ. ವರ್ಕ್ಸ್‌ನಲ್ಲಿ ಇನ್ನೂ ಬೇಕಾದಷ್ಟು ಹಣ ಇದೆ. ಅದನ್ನು ಚರ್ಚು ಮಾಡಿಸ್ಲಿ, ಖರ್ಚು ಮಾಡಬೇಕು ಎಂದು ನಾವು ಆದೇಶ ಕೊಟ್ಟಿದ್ದೇವೆ. ಆದುದರಿಂದ ನಮಗೆ ಹಣದ ಅಭಾವ ಏನೂ ಇಲ್ಲ. ಏನಾದರೂ ಬೋರ್‌ವೆಲ್ಸ್‌ಗೆ ಸಣ್ಣ ಸಣ್ಣ ರಿಗ್ಸ್ ಬೇಕಾದರೆ ಅದನ್ನು ತರಿಸೋಣ ಈ ವರ್ಷ ಕುಡಿಯುವ ನೀರಿನ ತೊಂದರೆ ಇದೆ ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಅದನ್ನು ಬಗೆಹರಿಸಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ಬೇಡ ಸ್ವಾಮಿ, ಯಾರನ್ನಾದರೂ ಸ್ಪೆಷಲ್ ಆಫೀಸರನ್ನು ಕೊಡಿ.

ಶ್ರೀ ಎಚ್. ಸಿದ್ದವೀರಪ್ಪ.—ಹಾಗಾದರೆ ನಾನೇ ಹೋಗಲೇ? ಅವರನ್ನು ಸರಿಯಾಗಿ ಉಪಯೋಗಿಸಿಕೊಂಡು ಕೆಲಸ ಮಾಡಿರುವುದು ನಮ್ಮ ಕೆಲಸವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ತಿಪಟೂರ್‌ನಲ್ಲಿ ಈ ರೀತಿ ಕುಡಿಯುವ ನೀರಿನ ತೊಂದರೆ ಇದೆ ಎಂದು ನನ್ನ ಹೈೇಹಿತರಾದ ಶ್ರೀಮಾನ್ ಟಿ. ಎಂ. ಮಂಜುನಾಥ್‌ರವರು ಒಂದು ವಾರದ ಹಿಂದೆ ಹೇಳಿದರು. ಇದುವರೆಗೂ ಅಲ್ಲಿಗೆ ಯಾವ ರಿಗ್ ಮೆಷಿನ್ ಹೋಗಲಿಲ್ಲ, ಅಲ್ಲಿ ಯಾವುದೂ ಕೂಡ ನೀರಿನ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಅದೇ ರೀತಿಯಾಗಿ ಅರಸೀಕೆರೆ, ಮೈಸೂರು, ಇನ್ನು ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದುದರಿಂದ ಈ ಸಮಸ್ಯೆಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಜರೂರಾಗಿ ಬಗೆಹರಿಸಲು ಟೆಲಿಫೋನ್ ಇನ್‌ಸ್ಪೆಕ್ಷನ್ ಮೇಲೆ ಕೆಲಸಮಾಡಿಸಿ ಆದಷ್ಟು ಜಾಗ್ರತೆ ಸಮಸ್ಯೆಯನ್ನು ಬಗೆಹರಿಸುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಅವರಿಗೆ ಒಂದು ಪ್ರೊಗ್ರಾಂ ಕೊಟ್ಟಿದ್ದೇವೆ. ಆದರ ಪ್ರಕಾರ ಒಂದು ದಿವಸಕ್ಕೆ ಒಂದು ಬಾವಿ ತೆಗೆಯಬೇಕು ಎಂತ ಇದೆ. ಅವರು 15 ದಿವಸಕ್ಕೆ ಒಂದು ಸಾರಿ ರಿಪೋರ್ಟ್ ಕಳುಹಿಸಬೇಕು. ಅವರು ಕೆಲಸ ಮಾಡದೇ ಇದ್ದರೆ ಅವರನ್ನು ಹೇಗೆ ವಿಪ್ ಮಾಡಬೇಕು ಎನ್ನುವುದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈ ಬಾವಿಯನ್ನು ಆಳ ಮಾಡುವುದಕ್ಕೆ ಬೇಕಾದಷ್ಟು ದುಡ್ಡು ಇದೆ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಈಗಾಗಲೇ ಬಾವಿಯನ್ನು ಆಳ ಮಾಡಿದ ಕಂಟ್ರಾಕ್ಟರಿಗೆ ಒಂದು ಆಣೆ ದುಡ್ಡೂ ಕೊಟ್ಟಿಲ್ಲ. ಈ ಕಾರಣದಿಂದ ಬಾವಿಯನ್ನು ಆಳ ಮಾಡುವುದಕ್ಕೆ ಕಂಟ್ರಾಕ್ಟರ್ಸ್ ಬರುವುದಿಲ್ಲ. ಆದ್ದರಿಂದ ಈ ಕೆಲಸಕ್ಕೆ ಸಾಕಷ್ಟು ದುಡ್ಡನ್ನು ಒದಗಿಸಿ ಕೊಡಬೇಕು ಎಂದು ಕೇಳುತ್ತೇನೆ.

ಎರಡನೆಯದಾಗಿ ಮಾನ್ಯ ರಾಚಯ್ಯನವರು ಬಂದಿದ್ದರು. ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳಿಕೊಂಡಾಗ ಬಾವಿಯನ್ನು ಆಳ ಮಾಡುವ ಕೆಲಸದ ಬಗ್ಗೆ ಅವರು ಡೆಪ್ಯೂಟಿ ಕಮೀಷನರಿಗೆ ಹೇಳಿ ಬಂದರು. ಡೆಪ್ಯೂಟಿ ಕಮೀಷನರು ಬಿ.ಡಿ.ಓ. ಗೆ ಆದೇಶಕೊಟ್ಟರು. ಡಿ.ಡಿ.ಓ. ಅವರು ವಿಲೇಜ್ ಪಂಚಾಯತಿ ಥೇರ್ಮನ್‌ಗೆ ಹೇಳಿದರು. ಅವರು ಈ ಕೆಲಸ ಮಾಡಿಸಿದರು. ಇದನ್ನು ನಾನು ಏತಕ್ಕೆ ಹೇಳಿದೆ ಎಂದರೆ ತಾವು ಡೆಪ್ಯೂಟಿ ಕಮೀಷನರಿಗೆ ಆದೇಶ ಕೊಟ್ಟರೆ ಅವರು ಬಿ.ಡಿ.ಓ. ಗೆ ಹೇಳುತ್ತಾರೆ. ಬಿ.ಡಿ.ಓ. ಪಂಚಾಯತಿ ಥೇರ್ಮನ್‌ಗೆ ಹೇಳುತ್ತಾರೆ. ಆ ಪಂಚಾಯತಿ ಥೇರ್ಮನ್ ಕೆಲಸ ಮಾಡಿಸಿದರೆ ದುಡ್ಡು ಕೊಡುವುದಿಲ್ಲ. ಅದಕ್ಕೆ ಈ ಮಾತನ್ನು ಹೇಳಬೇಕಾಯಿತು. ಆದುದರಿಂದ ತಾವು ಯಾವುದಾದರೂ ಕೆಲಸ ಮಾಡುವಾಗ ಕ್ರಮವರಿತು, ತಕ್ಷಣ ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಈ ರೀತಿ ಮಾಡಿ ಜನಗಳಿಗೆ ಬೇಗನೆ ಬಾವಿ ತೆಗೆಸಿಕೊಡಿ. ಬಾವಿ ತೆಗೆಯುವುದಕ್ಕೆ ಜನ ಮುಂದೆ ಬಂದರೂ ದುಡ್ಡು ಕೊಡುವುದಿಲ್ಲ. ಆದುದರಿಂದ ನಾನು ಹೇಳುವುದು ತಕ್ಷಣ ಯಾರನ್ನಾದರೂ ಅಲ್ಲಿಗೆ ಕಳುಹಿಸಿ, ಜಿಲ್ಲದೇ ಹೋದರೆ ಅವರಿಗೆ ಕರ್ತವ್ಯವಾಗಿ ಆದೇಶ ಕೊಟ್ಟು, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ನಿಮ್ಮನ್ನೆ ಹೇಳುತ್ತಿಲ್ಲ. ಆದರೆ ಅಲ್ಲಿರತಕ್ಕ ಕಷ್ಟದ ಜೊತೆಗೆ ಮಾತಿನ ಕಷ್ಟವನ್ನೂ ಸೇರಿಸಬೇಡಿ. ಬಾವಿಗಳನ್ನು ಆಳವಡಿಸತಕ್ಕ ಬಗ್ಗೆ 32 ಆರ್. ಡಿ ವರ್ಕ್ಸ್‌ನಲ್ಲಿ ಪ್ರಾವಿಜನ್ ಇಲ್ಲ. ಸಂಬಂಧಪಟ್ಟ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನವರೇ. ಆ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ಆದರೆ ಪರಿಣತರ ಅಭಿಪ್ರಾಯದಲ್ಲಿ ಈ ಬಾವಿಗಳನ್ನು ಆಳವಡಿಸುವುದಕ್ಕಿಂತ ಹೊಸ ಬಾವಿಗಳನ್ನು ಮಾಡುವುದೇ ಲೇಸೆಂದು ಹೇಳುತ್ತಿದ್ದಾರೆ. ಈ ಆರ್.ಡಿ. ವರ್ಕಿನಲ್ಲಿ 50 ಲಕ್ಷ ರೂಪಾಯಿಗಳಷ್ಟು ಇನ್ನೂ ಹಣವಿದೆ. ಇದು ಬಹಳ ಅಗತ್ಯವಾಗಿ ಆಗ ಬೇಕಾದ ಕೆಲಸವಾದ್ದರಿಂದ ಮಾಡಿಸೋಣ.

(*iii*) *re* : enchancement of water rate by the Bangalore Water Supply and Sewerage Board.

Sri T. R. SHAMANNA (Fort).—Sir, I call the attention of the Hon. Minister for Transport and Housing to the proposed enchancement of water rate by the Bangalore Water supply and sewerage Board.